# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No.** 409/2024

| | | |
|---|---|---|
| ಸಾಕ್ಷಿದಾರರ ಹೆಸರು: | ಶಿವಣ್ಣ | ಪ್ರಮಾಣ ಮಾಡಿದ ದಿನಾಂಕ 25.02.2026. |
| ತಂದೆಯ ಹೆಸರು: | ಸಿದ್ದಯ್ಯ | |
| ವಯಸ್ಸು: | 60 ವರ್ಷ | |
| ವೃತ್ತಿ: | ವ್ಯವಸಾಯ | CW-3 |
| ವಾಸಸ್ಥಳ: | ಉಮ್ಮತ್ತೂರು | PW-2 |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ಈ ಪ್ರಕರಣದ ಆರೋಪಿ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಗೆ ಈಗ ನಿಪಿ- 1 ನ್ನು ತೋರಿಸಲಾಗಿ ನಿಪಿ- 1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ- 1(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯು ಸ್ಥಳ ಮತ್ತು ಅಮಾನತು ಮಹಜರ್ ಆಗಿರುತ್ತದೆ. ನಿಪಿ-1 ರಲ್ಲಿ ಇರುವ ಅಂಶಗಳು ನನಗೆ ಗೊತ್ತಿಲ್ಲ. ನಾನು ಬೇರೆ ವಿಚಾರಕ್ಕೆ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರ ನಿರ್ದೇಶನದಂತೆ ನಾನು ನಿಪಿ-1ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-1 ಕ್ಕೆ ನನ್ನ ಜೊತೆ ಚಾಸಾ-2 ರವರು ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತಾರೆ. ಈ ಪ್ರಕರಣ ಯಾವ ಪ್ರಕರಣ ಎಂದೂ ಸಹ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ.)

## ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ

ದಿನಾಂಕ 05.04.2024 ರಂದು ಸಂಜೆ 4.15 ಗಂಟೆ ಸಮಯಲ್ಲಿ ಪೊಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಕರೆದು ಈ ಪ್ರಕರಣಕ್ಕೆ ಪಂಚರಾಗುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಪಂಚರಾಗುವುದಕ್ಕೆ ಒಪ್ಪಿಕೊಂಡು ಪೊಲೀಸ್ ಇಲಾಖೆ ವಾಹನದಲ್ಲಿ ಚಾಸಾ-1 ರವರ ಜೊತೆ ಉಮ್ಮತ್ತೂರು ಗ್ರಾಮದ ಲಿಂಗಣಪುರ ರಸ್ತೆಯ ಬಳಿ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತನು ಒಂದು ನೀಲಿ ಬ್ಯಾಗ್ ಹಿಡಿದುಕೊಂಡು ಬರುತ್ತಿದ್ದನು ಎಂದರೆ ಸರಿಯಲ್ಲ. ನಂತರ ಪೊಲೀಸರನ್ನು ನೋಡಿ ಓಡಲು ಪ್ರಾರಂಬಿಸಿರುತ್ತಾನೆ ಎಂದರೆ ಸರಿಯಲ್ಲ. ಪೊಲೀಸರು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಹಿಡಿದು ನನ್ನ ಸಮಕ್ಷಮದಲ್ಲಿ ಆರೋಪಿ ಕೈಯಲ್ಲಿದ್ದ ಬ್ಯಾಗನ್ನು ಪರಿಶೀಲಿಸಿದಾಗ ಅಲ್ಲಿ 90 M.L ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ 50 ಟೆಟ್ರಾ ಪ್ಯಾಕುಗಳನ್ನು ಇಟ್ಟುಕೊಂಡಿದ್ದನು ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯು ಈ ಮಧ್ಯಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಲು ಯಾವುದೇ ಅನುಮತಿ ಪತ್ರವನ್ನು ಪೊಲೀಸರಿಗೆ ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಹೆಸರು ಕೇಳಲಾಗಿ ಅವನು ತನ್ನ ಹೆಸರು ರಾಜು ಬಿನ್ ಸಿದ್ದಯ್ಯ, ಉಮ್ಮತ್ತೂರು ಬಾರ್ ನಲ್ಲಿ ಕೆಲಸ ಎಂದು ಪೊಲೀಸರಿಗೆ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಪೊಲೀಸರು ಸದರಿ 50 ಟೆಟ್ರಾ ಪ್ಯಾಕುಗಳ ಪೈಕಿ 30 ಟೆಟ್ರಾಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬಿಳಿ ಚೀಲದಲ್ಲಿ ಕಟ್ಟಿ "K" ಎಂಬ ಅಕ್ಷರದಿಂದ ಸೀಲು ಮಾಡಿ ಪಂಚನಾಮೆ ಮುಖಾಂತರ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿತನನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ ಹಾಗೂ ನ್ಯಾಯಾಲಯದ ಮುಂದಿರುವ ಮಧ್ಯದ ಸ್ಯಾಸೆಟ್‌ಗಳನ್ನು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪೊಲೀಸರು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ನ್ನು ನನಗೆ ಮತ್ತು ಚಾಸಾ-2 ರವರಿಗೆ ಓದಿ ಹೇಳಿ ನಂತರ ನಮ್ಮ ಸಹಿಗಳನ್ನು ಪಡೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಾನು ತನಿಖಾಧಿಕಾರಿಯ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರುೂ ಸಹ, ನಾನು ಈ ಪ್ರಕರಣದಲ್ಲಿ ಪಂಚನಾಗಿದ್ದರೂ ಸಹ ಆರೋಪಿಯನ್ನು ಶಿಕ್ಷೆಯಿಂದ ಪಾರು ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪಾಟೀ ಸವಾಲು: ಆರೋಪಿ ಪರ ವಕೀಲರರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

25.02.2026.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.